







**ದಿನಾಂಕ: 21-02-24 ಗೌರವಾನ್ವಿತ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರು ಉಭಯ ಸದನಗಳ ಸದಸ್ಯರುಗಳಿಗೆ ಹಾಗೂ ಸಚಿವರಿಗೆ, ಅಧಿಕಾರಿಗಳಿಗೆ, ಹಿತೈಷಿಗಳಿಗೆ ಪ್ರೀತಿಯ ಭೋಜನಕೂಟವನ್ನು ವಿಧಾನಸೌಧದ ಬಾಂಕ್ವೆಟ್ ಹಾಲ್ ನಲ್ಲಿ ಏರ್ಪಡಿಸಿದ್ದರು. ಭೋಜನಕೂಟದಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳು ಸೇರಿದಂತೆ ಹಲವಾರು ಸಚಿವರು, ಶಾಸಕರು, ಗಣ್ಯಮಾನ್ಯರು ಹಿರಿಯ ಅಧಿಕಾರಿಗಳು, ಹಿತೈಷಿಗಳು ಭಾಗವಹಿಸಿ ಉತ್ತರ ಕರ್ನಾಟಕ ಶೈಲಿಯ ವಿವಿಧ ಬಗೆ ಬಗೆಗಳ ಸಿಹಿ ತಿನಿಸುಗಳನ್ನ ಹಾಗೂ ಹಲವಾರು ಚಟ್ನಿ ವಿವಿಧ ತೆರ ನಾದ ಪಲ್ಯಗಳನ್ನ ಸವಿದ ಸ್ಮರಣೀಯ ಕ್ಷಣಗಳು.**

**ಕಳೆದ 43 ವರ್ಷಗಳಿಂದ ವಿಧಾನ ಪರಿಷತ್ ಸದಸ್ಯರಾಗಿ ಸಚಿವರಾಗಿ ಮೂರನೇ ಬಾರಿ ಸಭಾಪತಿಗಳಾಗಿ ಸೇವೆ ಸಲ್ಲಿಸುತ್ತಿರುವ ಬಸವರಾಜ ಹೊರಟ್ಟಿ ಅವರು ಐತಿಹಾಸಿಕ ದಾಖಲೆಗಳಿಗೂ ಭಾಜನರಾಗಿದ್ದಾರೆ. 2022 ರಲ್ಲಿ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಸೇರಿದಂತೆ ಕಳೆದ ತಿಂಗಳು ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಗರಿ ಹೊರಟ್ಟಿ ಅವರ ಮೂಡಿಗೆ ಸೇರಿದೆ. ಈ ಕ್ಷಣವನ್ನು ಸೇರಿದ ಎಲ್ಲರೂ ಸ್ಮರಿಸಿಕೊಂಡು ಹೊರಟ್ಟಿಯವರಿಗೆ ಅಭಿನಂದನೆಗಳನ್ನ ಸಲ್ಲಿಸಿದರು. ಶಿಕ್ಷಕರೊಬ್ಬರಿಗೆ ಇಷ್ಟೊಂದು ಅತ್ಯುನ್ನತ ಗೌರವಗಳು ಸಿಕ್ಕಿದ್ದು ನಾಡಿನಲ್ಲಿಯೇ ಪ್ರಥಮ ಎಂದು ಶಿಕ್ಷಕ ಸಮೂಹ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಹೊರಟ್ಟಿ ಅವರು ನಾಡಿನ ಸಮಸ್ತ ಶಿಕ್ಷಕರಿಗೆ ಹೆಮ್ಮೆ ಹಾಗೂ ಸ್ವಾಭಿಮಾನದ ಸಂಕೇತ.**